# ಶ್ರೀರಾಮಕೃಷ್ಣ ಆಶ್ರಮ, ರಾಜ್‌ಕೋಟ್: ಒಂದು ಕಿರು ಪರಿಚಯ

ಬ್ರ. ಅಭಯ ಚೈತನ್ಯ

**ಗುಜರಾತ್** ಅತ್ಯಂತ ಭೀಕರವಾದ ಪ್ರಾಕೃತಿಕ ಹಾಗೂ ಮಾನವನಿರ್ಮಿತ ವಿಕೋಪಗಳಿಂದ ನಲುಗಿಹೋಗಿರುವ ರಾಜ್ಯ. ಆದರೆ ಅಲ್ಲಿನ ಜನತೆಯ ನೋವು ನಲಿವುಗಳಿಗೆ ಮಾನವೀಯ ಕಾಳಜಿಯನ್ನು ಹೊತ್ತು ಅಷ್ಟೊಂದು ಸದ್ದುಗದ್ದಲವಿಲ್ಲದೆ ಸ್ಪಂದಿಸುತ್ತಿರುವ ರಾಜಕೋಟ್‌ನಲ್ಲಿನ ರಾಮಕೃಷ್ಣ ಆಶ್ರಮವು ತನ್ನ ೭೫ ವರ್ಷಗಳ ಸೇವೆಯನ್ನು ಸಲ್ಲಿಸಿದ ಹೆಮ್ಮೆಗೆ ಪಾತ್ರವಾಗಿದೆ. ಈ ಲೇಖನವನ್ನು ಸಿದ್ಧಪಡಿಸಿದ ಬ್ರ. ಅಭಯ ಚೈತನ್ಯರು ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವರು.

ಸ್ವಾಮಿ ವಿವೇಕಾನಂದರು ಹಾಗೂ ಅವರ ಸೋದರ ಸಂನ್ಯಾಸಿಗಳು ತಮ್ಮ ಸಾಧನ ಕಾಲದಲ್ಲಿ ಪಶ್ಚಿಮ ಭಾರತದಲ್ಲಿ ಸಂಚರಿಸುತ್ತ ಗುಜರಾತಿಗೆ ಭೇಟಿ ನೀಡಿದರು. ೧೮೯೧-೯೨ರ ನಡುವೆ ಸ್ವಾಮೀಜಿ ಗುಜರಾತಿನ ಅಹಮದಾಬಾದ್, ವಧ್ವಾನ್, ಲಿಂಬ್ಡಿ, ಭಾವನಗರ್, ಸಿಹೋರ್, ಜುನಾಗಡ್, ಗಿರ್‌ನಾರ್, ಭುಜ್, ವೆರಾವಲ್ (ಸೋಮನಾಥ್), ಪೋರ್‌ಬಂದರ್, ದ್ವಾರಕಾ, ಮಾಂಡ್ವಿ, ನಾರಾಯಣ್ ಸರೋವರ್, ಪಾಲಿಟಾನಾ, ನದಿಯಾದ್ ಮತ್ತು ಬರೋಡ ಪ್ರಾಂತ್ಯಗಳಿಗೆ ಭೇಟಿ ನೀಡಿದರೆಂದು ಅವರ ಜೀವನ ಚರಿತ್ರೆಯಲ್ಲಿ ದಾಖಲಾಗಿದೆ. ಸ್ವಾಮಿ ಅಖಂಡಾನಂದಜಿ ಹಾಗೂ ವಿಜ್ಞಾನಾನಂದಜಿಯವರು ರಾಜ್‌ಕೋಟ್‌ಗೆ ಭೇಟಿ ನೀಡಿದ್ದಾರೆ. ೧೯೨೬ರಲ್ಲಿ ಮಾಯಾವತಿಯ ಅದ್ವೈತ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಮಾಧವಾನಂದಜಿ ಮಹಾರಾಜರು (ಮುಂದೆ ರಾಮಕೃಷ್ಣ ಸಂಘದ ೯ನೆಯ ಅಧ್ಯಕ್ಷರು) ರಾಜ್‌ಕೋಟ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ, ನಗರದ ಗಣ್ಯವ್ಯಕ್ತಿಗಳು ಅವರನ್ನು ಅಲ್ಲಿ ಒಂದು ಕೇಂದ್ರವನ್ನು ತೆರೆಯುವಂತೆ ನಿವೇದಿಸಿಕೊಂಡರು. ಮೊರ್ವಿಯ ಮಹಾರಾಜ ಶ್ರೀ ಲಖಧೀರ್‌ಜಿಯವರ ಉದಾರ ಸಹಾಯದಿಂದ ೧೯೨೭ ಮಾರ್ಚ್ ೫ರಂದು ರಾಜ್‌ಕೋಟ್‌ನ ಸರ್ಕಾರಿ ವಿಶ್ರಾಂತಿ ಭವನದಲ್ಲಿ ಗುಜರಾತಿನ ಪ್ರಥಮ ರಾಮಕೃಷ್ಣ ಮಠದ ಕೇಂದ್ರವು ಅಸ್ತಿತ್ವಕ್ಕೆ ಬಂದಿತು. ಕಾಲಾನಂತರ ರಾಜ್‌ಕೋಟ್‌ನ ಠಾಕೋರ್ ಸಾಹೇಬ್ ಶ್ರೀ ಧರ್ಮೇಂದ್ರ ಸಿಂಗ್‌ರವರು ಆಶ್ರಮಕ್ಕಾಗಿ (ಇದೀಗ ಆಶ್ರಮವು ನಿಂತಿರುವ) ಒಂದು ಜಮೀನನ್ನು ಔಪಚಾರಿಕ ಬೆಲೆಗೆ ಬಿಟ್ಟುಕೊಟ್ಟರು. ೫ನೆ ಅಕ್ಟೋಬರ್ ೧೯೩೫ರಂದು ಆಶ್ರಮವು ತನ್ನ ನೂತನ ನಿವೇಶನಕ್ಕೆ ಸ್ಥಳಾಂತರಗೊಂಡಿತು. ರಾಜ್‌ಕೋಟ್ ಸಂಸ್ಥಾನದ ಮಹಾರಾಜ ಠಾಕೂರ್ ಸಾಹೇಬರು ರಾಮಕೃಷ್ಣ ಮಠದ ಹಿರಿಯ ಸ್ವಾಮಿಗಳ ದಿವ್ಯಸನ್ನಿಧಿಯಲ್ಲಿ ಈ ಕೇಂದ್ರವನ್ನು ಉದ್ಘಾಟಿಸಿದರು. ೧೯೪೨ರ ಡಿಸೆಂಬರ್ ತಿಂಗಳಿನಲ್ಲಿ ಶ್ರೀರಾಮಕೃಷ್ಣರಿಗೆ ನೂತನ ದೇವಾಲಯವೊಂದು ಅರ್ಪಿಸಲ್ಪಟ್ಟಿತು. ೧೬ನೆ ಆಗಸ್ಟ್ ೧೯೭೧ರಂದು ಸ್ವಾಮಿ ವೀರೇಶ್ವರಾನಂದಜಿ ಮಹಾರಾಜ್‌ರವರು ಶ್ರೀರಾಮಕೃಷ್ಣರ ವಿಶ್ವಭಾವೈಕ್ಯ ದೇವಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ, ಕೊನೆಗೆ ೬ನೇ ಏಪ್ರಿಲ್ ೧೯೭೮ರಂದು ದೇಗುಲವನ್ನು ಲೋಕಕ್ಕೆ ಸಮರ್ಪಿಸಿದರು.

ಗುಜರಾತಿನಲ್ಲಿ ಅವಿರತ ಸೇವೆಯನ್ನು ಸಲ್ಲಿಸುತ್ತಿರುವ ರಾಜ್‌ಕೋಟ್‌ನ ಶ್ರೀರಾಮಕೃಷ್ಣ ಆಶ್ರಮಕ್ಕೆ ೨೦೦೨ನೆ ಇಸವಿಗೆ ೭೫ ವರ್ಷಗಳು ತುಂಬುತ್ತದೆ.

**ದೇವಾಲಯ ಹಾಗೂ ದೈನಂದಿನ ಚಟುವಟಿಕೆಗಳು:** ದೇವಾಲಯದ ಗರ್ಭಗೃಹದಲ್ಲಿ ಕಮಲದಾಕಾರದ ವೇದಿಯ ಮೇಲಿರುವ ಶ್ರೀರಾಮಕೃಷ್ಣರ ಶುಭ್ರ ಅಮೃತಶಿಲೆಯ ವಿಗ್ರಹವು ಬೇಲೂರು ಮಠದ ವಿಗ್ರಹದ ಪಡಿಯಚ್ಚಿನಂತೇ ಇದೆ. ಹಿಂದೂ, ಬೌದ್ಧ, ಕ್ರೈಸ್ತ ಹಾಗೂ ಇಸ್ಲಾಂ ಶಿಲ್ಪಶಾಸ್ತ್ರಗಳ ಸಮನ್ವಯವಾಗಿರುವ ಈ ದೇವಾಲಯವು ಶ್ರೀರಾಮಕೃಷ್ಣ-ವಿವೇಕಾನಂದರು ಸಾಕ್ಷಾತ್ಕರಿಸಿಕೊಂಡಿರುವ ಸರ್ವಧರ್ಮಸಮನ್ವಯದ ತತ್ತ್ವವನ್ನು ಲೋಕಕ್ಕೆ ಸಾರಿ ಹೇಳುತ್ತದೆ. ದೇವಾಯಲಯವನ್ನು ನೋಡಿದವರಿಗೆ ಇದು ಬೇಲೂರು ಮಠದಲ್ಲಿರುವ ವಿವೇಕಾನಂದ ಕಲ್ಪಿತ ಮೂಲ ದೇವಾಲಯವೇ ಏನೊ ಎಂಬ ಭ್ರಮೆ ಹುಟ್ಟಿಸದಿರದು.

ಈ ಭವ್ಯ ದೇವಾಲಯದಲ್ಲಿ ಪ್ರತಿನಿತ್ಯವೂ ಪೂಜೆ, ಆರತಿ, ಪ್ರಾರ್ಥನೆ ಹಾಗೂ ಭಜನೆಗಳು ನಡೆಯುತ್ತಿದ್ದು ಸಮಾಜದ ಸಕಲ ವರ್ಗಗಳ ಜನರೂ ಇಲ್ಲಿ ಕಲೆತು ತಮ್ಮ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಲು ಅವಕಾಶವಿದೆ. ಏಕಾದಶಿಗಳಂದು ರಾಮನಾಮ ಹಾಗೂ ಅನ್ಯ ಮತಧರ್ಮಗಳ ಸಂತ-ಪ್ರವಾದಿಗಳ ಜಯಂತಿಗಳಂದು ವಿಶೇಷ ಪೂಜೆ-ಹೋಮಗಳು, ಪ್ರವಚನಾದಿ ಗಳು ನಡೆಯುತ್ತವೆ.

**ಪ್ರವಚನ ಕಾರ್ಯಗಳು :** ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಸಭಾಂಗಣದಲ್ಲಿ ಧಾರ್ಮಿಕ ಪ್ರವಚನ ಕಾರ್ಯಕ್ರಮಗಳು ನಡೆಯುತ್ತವೆ. ಭಕ್ತರಿಗೆ ಆಧ್ಯಾತ್ಮಿಕ ಶಿಬಿರಗಳನ್ನೂ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ವ್ಯವಸ್ಥಾಪಕ ಹಾಗೂ ಅಧಿಕಾರಿ ವರ್ಗಗಳ ಜನರಿಗೆ ಚರ್ಚಾಕೂಟಗಳನ್ನೂ ನಿಯತವಾಗಿ ನಡೆಸಲಾಗುತ್ತದೆ.

ಪ್ರಕಾಶನ ಮತ್ತು ಪುಸ್ತಕ ಮಾರಾಟ: ರಾಮಕೃಷ್ಣ-ವಿವೇಕಾನಂದ ಸಾಹಿತ್ಯವನ್ನು ಗುಜರಾತಿ ಭಾಷೆಯಲ್ಲಿ ಪ್ರಕಟಿಸಿ ಅಲ್ಲಿನ ಜನತೆಗೆ ಅವುಗಳನ್ನು ಮುಟ್ಟಿಸುವ ಕಾರ್ಯವನ್ನು ಸುಮಾರು ೭ ದಶಕಗಳಿಂದ ಯಶಸ್ವಿಯಾಗಿ ನಿರ್ವಹಿಸುತ್ತಿರುವುದು. ಆಶ್ರಮದಿಂದ ಪ್ರಕಟಿಸಲಾಗುತ್ತಿರುವ "ರಾಮಕೃಷ್ಣ-ಜ್ಯೋತ್" ಎಂಬ ಗುಜರಾತಿ ಮಾಸಪತ್ರಿಕೆ ಸುಮಾರು ಒಂದು ದಶಕಕ್ಕೂ ಮೀರಿ ಅಲ್ಲಿನ ಓದುಗರಿಗೆ ರಾಮಕೃಷ್ಣ ವಿವೇಕಾನಂದ ಸಾಹಿತ್ಯವನ್ನು ತಲುಪುವ ಮುಖ್ಯ ವಾಹಕವಾಗಿದೆ. ಇಷ್ಟೇ ಅಲ್ಲದೆ ಆಶ್ರಮವು ಸಂಚಾರಿ ಪುಸ್ತಕ ಮಾರಾಟದ ಘಟಕವನ್ನೂ ಹೊಂದಿದೆ.

ಗ್ರಂಥಾಲಯ ಮತ್ತು ಪ್ರದರ್ಶನ : ಸುಸಜ್ಜಿತವಾದ ಗ್ರಂಥಾಲಯಕ್ಕೇ ಸೇರಿಕೊಂಡಂತೆ ಭಾರತೀಯ ಸಂಸ್ಕೃತಿ, ಸ್ವಾಮಿ ವಿವೇಕಾನಂದ ಹಾಗೂ ರಾಮಕೃಷ್ಣ ಭಾವಾಂದೋಲನಗಳನ್ನು ಕುರಿತ ಛಾಯಾಚಿತ್ರಗಳ ಹಾಗೂ ತೈಲಚಿತ್ರಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ.

ಶ್ರೀರಾಮಕೃಷ್ಣ ವಿದ್ಯಾರ್ಥಿಮಂದಿರ : ಸಮಾಜದ ಎಲ್ಲ ಜಾತಿ ವರ್ಗಗಳಿಗೂ ಮುಕ್ತವಾಗಿ ತೆರೆಯಲ್ಪಟ್ಟಿರುವ, ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಿಂದ ಬರುವ ಮಕ್ಕಳಿಗೆ ನೆರವಾಗುವಂತೆ ಇರುವ ಈ ವಿದ್ಯಾರ್ಥಿ ಮಂದಿರ ಸ್ವಾಮಿ ವಿವೇಕಾನಂದರ ಗುರುಕುಲ ಶಿಕ್ಷಣದ ಆದರ್ಶವನ್ನು ತನ್ನ ಮುಂದಿಟ್ಟುಕೊಂಡಿದೆ.

ವೈದ್ಯಕೀಯ ಸೇವೆ : ರಾಮಕೃಷ್ಣ ಮಹಾಸಂಘದ ಸೇವಾ ಘಟಕಗಳಲ್ಲಿ ವೈದ್ಯಕೀಯ ಸೇವೆ ಪ್ರಮುಖವಾದುದು. ಉಚಿತ ವೈದ್ಯಕೀಯ ಸೇವೆಯನ್ನು ಸಮಾಜದ ಎಲ್ಲ ವರ್ಗಗಳಿಗೂ ಒದಗಿಸುತ್ತಿರುವ ರಾಜ್‌ಕೋಟ್ ಆಶ್ರಮದಲ್ಲಿ ಹೋಮಿಯೋಪಥಿ, ಹಾಗೂ ಆಯುರ್ವೇದ ಚಿಕಿತ್ಸೆ ಲಭ್ಯವಿದೆ. ಅಲ್ಲದೆ ಸಂಚಾರಿ ಔಷಧಾಲಯ ವಾಹನದಲ್ಲಿ ಆಶ್ರಮದ ಭಕ್ತರು ಹಾಗೂ ಸ್ವಯಂಸೇವಕರು ದೂರದ ಹಳ್ಳಿಗಳಿಗೂ ವೈದ್ಯಕೀಯ ಸೌಲಭ್ಯಗಳನ್ನು ತಲುಪಿಸುತ್ತಿದ್ದಾರೆ. ಆ ಹಳ್ಳಿಗಳಲ್ಲಿನ ಮಕ್ಕಳಿಗೆ ನಿಯತ ಅಕ್ಷರಾಭ್ಯಾಸ, ಆರೋಗ್ಯ ಹಾಗೂ ಸಾಂಸ್ಕೃತಿಕ ಶಿಕ್ಷಣವನ್ನೂ ಆಶ್ರಮದ ಸ್ವಯಂಸೇವಾಶಿಕ್ಷಕರ ತಂಡ ನೀಡುತ್ತಿದೆ.

ಪರಿಹಾರ ಹಾಗೂ ಪುನರ್ವಸತಿ ಕಾರ್ಯಗಳು : ರಾಜ್ಯದಲ್ಲಿ ತಲೆದೋರುವ ಬರಗಾಲ, ನೆರೆ, ಚಂಡಮಾರುತ, ಭೂಕಂಪಗಳೇ ಮೊದಲಾದ ದುಃಸ್ಥಿತಿಗಳಲ್ಲಿ ಆಶ್ರಮವು ತನ್ನದೇ ಆದ ನಮ್ರ ರೀತಿಯಲ್ಲಿ ಪರಿಹಾರ ಹಾಗೂ ಪುನರ್ವಸತಿ ಕಾರ್ಯಗಳ ಸವಾಲನ್ನು ಸ್ವೀಕರಿಸಿ ನಡೆಸಿದ ಪರಿಹಾರ ಕಾರ್ಯಗಳೆಷ್ಟೋ, ಕಟ್ಟಿದ ಮನೆಗಳೆಷ್ಟೋ, ಕಟ್ಟಿದ ಶಾಲೆಗಳೆಷ್ಟೋ!

ಮೌಲ್ಯಾಧಾರಿತ ವಿದ್ಯಾಭ್ಯಾಸದ ಕೇಂದ್ರ : ಜನವರಿ ೨೦೦೨ರಿಂದ ಆಶ್ರಮದ ಸಭಾಂಗಣದಲ್ಲಿ ನಗರದ ವಿವಿಧ ಶಾಲಾ ಮಕ್ಕಳಿಗಾಗಿ ಗುಜರಾತಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಮೌಲ್ಯಾಧಾರಿತ ಶಿಕ್ಷಣ ಕಾರ್ಯಕ್ರಮಗಳು ನಡೆಯುತ್ತಿವೆ. ಪ್ರತಿಯೊಂದು ತರಗತಿಯ ನಂತರ ಸ್ವಾಮಿ ವಿವೇಕಾನಂದರನ್ನು ಕುರಿತ ಪುಸ್ತಕಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಇದರ ಅಂಗವಾಗಿ ಆಶ್ರಮದ ಆವರಣದಲ್ಲಿ ಹಾಗೂ ಗುಜರಾತಿನ ಇತರೆಡೆ ಅನೇಕ ಯುವ ಸಮ್ಮೇಳನಗಳನ್ನು ಆಯೋಜಿಸಲಾಗಿದ್ದು ಆಶ್ರಮದ ಸಂನ್ಯಾಸಿಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾರೆ.

ಶ್ರೀರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ : ರಾಜ್ಯದ ಎಲ್ಲ ಕಡೆಗಳಲ್ಲೂ ವ್ಯವಸ್ಥಿತವಾಗಿ ರಾಮಕೃಷ್ಣ-ವಿವೇಕಾನಂದರ ಸಂದೇಶಗಳನ್ನು ತಲುಪಿಸಲು ಸ್ಥಾಪಿತವಾದ "ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ್ ಪರಿಷದ್, ಗುಜರಾತ್" ಬರೋಡ, ಅಹಮದಾಬಾದ್, ಭುಜ್ ಮತ್ತು ವಲ್ಸಡ್ ಜಿಲ್ಲೆಗಳನ್ನು "ಪ್ರಾಯೋಜಕ ಕೇಂದ್ರ" (promoter centres)ಗಳೆಂದು ಗುರುತಿಸಿ ಇದರ ವ್ಯಾಪ್ತಿಯನ್ನು ಜುನಾಗಡ್, ಗಾಂಧಿನಗರ್, ಗಾಂಧಿಧಾಮ್, ಧರಮ್‌ಪುರ್, ಸೂರತ್, ಭಾವನಗರ್ ಹಾಗೂ ಇತರೆ ಸ್ಥಳಗಳಿಗೆ ವಿಸ್ತರಿಸಿ ಅಲ್ಲೆಲ್ಲ ಕೇಂದ್ರಗಳನ್ನು ತೆರೆದಿದೆ. ಈ ಕೇಂದ್ರಗಳ ಸಹಾಯದಿಂದ ಗುಜರಾತಿನ ಎಲ್ಲ ಪ್ರಮುಖ ಸ್ಥಳಗಳಲ್ಲಿ ಸ್ವಾಮಿ ವಿವೇಕಾನಂದರ ಕಂಚಿನ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳು ನಿಯತವಾಗಿ ಸತ್ಸಂಗಗಳನ್ನೂ, ರಾಮಕೃಷ್ಣ ಮಹಾಸಂಘದ ಸಂನ್ಯಾಸಿ ವೃಂದದವರಿಂದ ಪ್ರವಚನಗಳನ್ನೂ ಏರ್ಪಡಿಸುತ್ತವೆ.

ಈ ಮುಂಚೆ ರಾಜಕೋಟ್ ಆಶ್ರಮದ ಉಪಕೇಂದ್ರಗಳಾಗಿದ್ದ ಲಿಂಬ್ಡಿ ಹಾಗೂ ಪೋರ್‌ಬಂದರ್ ಆಶ್ರಮಗಳು ಇದೀಗ ರಾಮಕೃಷ್ಣ ಮಹಾಸಂಘದ ಎರಡು ಸ್ವತಂತ್ರ ಶಾಖೆಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಸ್ವಾಮಿ ವಿವೇಕಾನಂದರ ಉದಾತ್ತ ಆದರ್ಶಕ್ಕೆ ಬದ್ಧವಾಗಿದ್ದು, ಅವರ ಛಲವನ್ನು ಮೈಗೂಡಿಸಿಕೊಂಡಿರುವ, ಸಮಾಜದ ಹಿತಚಿಂತನೆಯೇ ತನ್ನ ಧ್ಯೇಯವನ್ನಾಗಿರಿಸಿಕೊಂಡಿರುವ ರಾಜ್‌ಕೋಟ್‌ನ ರಾಮಕೃಷ್ಣ ಆಶ್ರಮವು ಎಲ್ಲ ಜನರ ಪ್ರಶಂಸೆಗೆ ಅರ್ಹವಾಗಿದೆ. ✪

ಒಬ್ಬ ಚಿಕ್ಕ ಹುಡುಗನು ತನ್ನ ತಾಯಿಯೊಡನೆ ಕೋಪ ಮಾಡಿಕೊಂಡು "ನಿನಗೆ ಧಿಕ್ಕಾರ, ನಿನಗೆ ಧಿಕ್ಕಾರ" ಎಂದು ಕೂಗುತ್ತಾ ಮನೆಯಿಂದ ಓಡಿದನು. ಅವನು ಒಂದು ಕಣಿವೆಗೆ ಹೋಗಿ ಅಲ್ಲಿಯೂ ಅದೇ ಕೋಪದಿಂದಲೇ "ನಿನಗೆ ಧಿಕ್ಕಾರ ನಿನಗೆ ಧಿಕ್ಕಾರ" ಎಂದು ಕೂಗಿದನು. ಅವನಿಗೆ ಆಗ "ನಿನಗೆ ಧಿಕ್ಕಾರ, ನಿನಗೆ ಧಿಕ್ಕಾರ" ಎಂದು ಪ್ರತಿಧ್ವನಿ ಕೇಳಿಸಿತು. ಅದನ್ನು ಕೇಳಿ ಭಯದಿಂದ ಅವನು ಮತ್ತೆ ಮನೆಗೆ ಓಡಿದ. ಯಾರೋ ಒಬ್ಬ ಹುಡುಗನು ಅಲ್ಲಿ ನಿನಗೆ ಧಿಕ್ಕಾರ ನಿನಗೆ ಧಿಕ್ಕಾರ ಎಂದು ಕೂಗುತ್ತಾನೆ ಎಂದು ತಾಯಿಗೆ ಹೇಳಿದನು. ತಾಯಿಯು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನೀನು ಮತ್ತೆ ಹೋಗಿ ನಾನು ನಿನ್ನನ್ನು ಪ್ರೀತಿಸುತ್ತೇನೆ ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಹೇಳು.. ಹುಡುಗನು ಹಾಗೆಯೇ ಮಾಡಿದಾಗ ಅದೇರೀತಿಯ ಪ್ರತಿಧ್ವನಿ ಕೇಳಿಸಿತು. ನಾವೇನು ಕೊಡುತ್ತೇವೆಯೊ ಅದನ್ನೇ ಪಡೆಯುತ್ತೇವೆ.